## ಮೀನು ಸಾಕಾಣಿಕೆ ಜೊತೆಯಲ್ಲಿ ಬಾತುಕೋಳಿ ಸಾಕಾಣಿಕೆ

ಮೀನು ಸಾಕಣೆಯೊಂದಿಗೆ ಸಮಗ್ರ ಕೃಷಿ ಕೈಗೊಳ್ಳಲು ಬಾತುಕೋಳಿ ತುಂಬಾ ಸೂಕ್ತ. ಇದರಿಂದ ಅನೇಕ ಉಪಯೋಗಗಳು ಇವೆ. ಬಾತುಕೋಳಿಯು ಕೊಳದಲ್ಲಿರುವ ಅನುಪಯುಕ್ತವಾದ ಕೀಟಗಳು ಮತ್ತು ಮೀನುಗಳನ್ನು ತಿನ್ನುತ್ತದೆ. ಆಹಾರಕ್ಕಾಗಿ ಕೊಳದ ಬದುವಿನ ಮಣ್ಣು ಕದಡುವುದರಿಂದ ಮಣ್ಣಿನಲ್ಲಿರುವ ಪೌಷ್ಟಿಕಾಂಶಗಳನ್ನು ಒದಗಿಸಲ್ಪಡುವುದರಿಂದ ಕೊಳದ



ನೈಸರ್ಗಿಕ ಆಹಾರ ಉತ್ಪಾದನೆಗೆ ಸಹಾಯಕವಾಗುತ್ತದೆ. ಬಾತುಕೋಳಿಗಳು ನೀರಿನಲ್ಲಿ ಓಡಾಡುವುದರಿಂದ ನೀರಿನಲ್ಲಿ ಕರಗಿರುವ ಆಮ್ಲಜನಕದ ಪ್ರಮಾಣ ಹೆಚ್ಚಾಗುತ್ತದೆ ಮತ್ತು ಕೊಳದಲ್ಲಿ ಓಡಾಡುವಾಗ ಗೊಬ್ಬರ ಹಾಕುವುದರಿಂದ ಗೊಬ್ಬರವು ಕೊಳದ ಎಲ್ಲಾ ಭಾಗದಲ್ಲಿ ಬಿದ್ದು ನೈಸರ್ಗಿಕ ಆಹಾರ ಸದಾ ಉತ್ಪತ್ತಿಯಾಗಿ ಮೀನುಗಳ ಶೀಘ್ರ ಬೆಳವಣಿಗೆಗೆ ಸಹಾಯವಾಗುತ್ತದೆ.

ಮೀನು ಮರಿಗಳನ್ನು ಕೊಳಕ್ಕೆ ಬಿಟ್ಟು ಒಂದರಿಂದ ಒಂದೂವರೆ ತಿಂಗಳ ನಂತರ 5ರಿಂದ 6ತಿಂಗಳ ವಯಸ್ಸಿನ ಕಾಕಿ ಕ್ಯಾಂಬಲ್ ತಳಿಯ ಬಾತುಕೋಳಿಗಳನ್ನು ಎಕರೆಗೆ 100 ರಿಂದ 150 ರಂತೆ ಬಿಡಬೇಕು. ಈ ಬಾತುಕೋಳಿಗಳು ಕೊಳಕ್ಕೆ ಬೇಕಾಗುವ ಗೊಬ್ಬರವನ್ನು ಪೂರೈಸುತ್ತವೆ. ಬಾತುಕೋಳಿಗಳು ರಾತ್ರಿ ತಂಗುವುದಕ್ಕೆ ಮತ್ತು ಮೊಟ್ಟೆ ಇಡುವುದಕ್ಕೆ ಕೊಳದ ಬದುವಿನ ಮೇಲೆ ಗುಡಿಸಲನ್ನು ನಿರ್ಮಿಸಬೇಕು. ಬಾತುಕೋಳಿಗಳಿಗೆ ಕೊಳದಲ್ಲಿ ನೈಸರ್ಗಿಕವಾಗಿ ದೊರೆಯುವ ಆಹಾರ ಸಾಲದೆ ಇರುವುದರಿಂದ ಮೊಟ್ಟೆ ಕೋಳಿಗಳಿಗೆ ಕೊಡುವ ಆಹಾರ ಮತ್ತು ಅಕ್ಕಿತೌಡನ್ನು 1:2 ರ ಪ್ರಮಾಣದಲ್ಲಿ ಕೊಡಬೇಕು. ಬಾತುಕೋಳಿಗಳು ಆರು ತಿಂಗಳ ನಂತರ ಮೊಟ್ಟೆ ಇಡಲು ಪ್ರಾರಂಭಿಸಿ ಎರಡು ವರ್ಷಗಳವರೆಗೆ ಲಾಭದಾಯಕವಾಗಿ ಮೊಟ್ಟೆ ಇಡುತ್ತವೆ. ಈ ಕಾಲಾವಕಾಶ ಮೀನು ಸಾಕಣೆಗೆ ಸರಿಹೊಂದುತ್ತದೆ. ಹೀಗೆ ಮೀನಿನ ಜೊತೆ ಬಾತುಕೋಳಿಯನ್ನು ಸಮಗ್ರವಾಗಿ ಸಾಕುವುದರಿಂದ ಒಂದು ಎಕರೆ ವಿಸ್ತೀರ್ಣವುಳ್ಳ ಕೊಳದಲ್ಲಿ ಮೀನಿಗೆ ಯಾವುದೇ ಕೃತಕ ಆಹಾರವನ್ನು ಕೊಡದೆ 1000 ರಿಂದ 1500 ಕೆ.ಜಿ ಯಷ್ಟು ಮೀನಿನ ಇಳುವರಿಯನ್ನು ಪಡೆಯಬಹುದು.

## ಮೀನು ಸಾಕಾಣಿಕೆ ಜೊತೆಯಲ್ಲಿ ಕೃಷಿ, ತೋಟಗಾರಿಕಾ ಬೆಳೆಗಳು

ಕೃಷಿ ಹಾಗೂ ತೋಟಗಾರಿಕಾ ಬೆಳೆಗಳ ಉತ್ಪನ್ನ ಹಾಗೂ ಉಪ ಉತ್ಪನ್ನಗಳನ್ನು ಮೀನುಗಳಿಗೆ ಆಹಾರವಾಗಿ ಬಳಸಿಕೊಳ್ಳಬಹುದಾಗಿದೆ. ಕೃಷಿ ಕೊಳದ ಬದುಗಳ ಇಳಿಜಾರಿನ ಪ್ರದೇಶವನ್ನು ಅಲ್ಪಾವಧಿ ತರಕಾರಿ ಬೆಳೆಗಳಾದ ಬೆಂಡೆ, ಬದನೆ, ಸೌತೆ, ಸೊಪ್ಪು ಇತ್ಯಾದಿ ಬೆಳೆಸಲು ಬಳಸಬಹುದು. ಬದುಗಳ ಮೇಲ್ಭಾಗವನ್ನು ತೆಂಗಿನ ಗಿಡಗಳನ್ನು ನೆಡಲು ಬಳಸಬಹುದು. ಒಂದು ಎಕರೆ ಕೊಳದ ಸುತ್ತ ಬದುವಿನ ಮೇಲೆ ಸುಮಾರು 40 ರಿಂದ 45 ತೆಂಗಿನ ಗಿಡಗಳನ್ನು ನೆಡಬಹುದು, ಇದಲ್ಲದೆ ಪಪ್ಪಾಯ, ನಿಂಬೆ ಹಣ್ಣಿನ ಗಿಡಗಳನ್ನು ನೆಟ್ಟು ಬೆಳಸಬಹುದು. ಮೀನು ಕೃಷಿಯ ಕೊಳದಲ್ಲಿ ಗೊಬ್ಬರ ಮತ್ತು ತ್ಯಾಜ್ಯ ವಸ್ತುಗಳನ್ನು ಉಪಯೋಗಿಸುವುದರಿಂದ ಕೊಳದ ತಳಭಾಗದಲ್ಲಿ ಶೇಖರವಾದ ಕೆಸರು ಅಥವಾ ಸೋಸು ಮಣ್ಣನ್ನು ಹಾಗೂ ಫಲವತ್ತಾದ ಮೀನು ಕೃಷಿ ಕೊಳದ ನೀರನ್ನು ಕೃಷಿ ಹಾಗೂ ತೋಟಗಾರಿಕಾ ಬೆಳೆಗಳನ್ನು ಬೆಳೆಸಲು ಬಳಸಬಹುದು.




ಈ ಪದ್ದತಿಯಲ್ಲಿ ಲಭ್ಯವಿರುವ ಸಾವಯವ ಗೊಬ್ಬರಗಳನ್ನು ನೀರಿನ ಫಲವತ್ತತೆಗೆ ಹಾಗೂ ಕೃಷಿಯಲ್ಲಿ ಬರುವ ತ್ಯಾಜ್ಯ ವಸ್ತುಗಳನ್ನು ಆಹಾರವಾಗಿ ಬಳಸಿ ಸುಮಾರು 1000 ರಿಂದ 1500 ಕೆ.ಜಿ ಯಷ್ಟು ಮೀನಿನ ಇಳುವರಿಯನ್ನು ಪಡೆಯಬಹುದಾಗಿದೆ.

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

**ಐ.ಸಿ.ಎ.ಆರ್-ಕೃಷಿ ವಿಜ್ಞಾನ ಕೇಂದ್ರ**

ದಕ್ಷಿಣ ಕನ್ನಡ, ಮಂಗಳೂರು

# ಸಮಗ್ರ ಮೀನು ಕೃಷಿ



ತಾಂತ್ರಿಕ ಮಾಹಿತಿ

ಡಾ। ಟಿ. ಎಸ್. ಅಣ್ಣಪ್ಪಸ್ವಾಮಿ

ಡಾ। ಹೆಚ್. ಹನುಮಂತಪ್ಪ

ಕು. ಭಾಗ್ಯಶ್ರೀ. ಆರ್ ಚಿತ್ತರಗಿ

**ಐ.ಸಿ.ಎ.ಆರ್-ಕೃಷಿ ವಿಜ್ಞಾನ ಕೇಂದ್ರ**

**ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು**

**2016**

e-mail: kvkdk@rediffmail.com Ph: 0824-2431872 Fax:0824-2430060

Website: www.kvkdk.org

# ಸಮಗ್ರ ಮೀನು ಕೃಷಿ

ಮೀನು ಸಾಕಾಣಿಕೆಯನ್ನು ಇತರೆ ಕೃಷಿಗಳೊಂದಿಗೆ ವ್ಯವಸ್ಥಿತ ರೂಪದಲ್ಲಿ ಅಳವಡಿಸಿ ಅನುಪಯುಕ್ತ ವಸ್ತುಗಳನ್ನು ಉಪಯುಕ್ತ ವಸ್ತುಗಳನ್ನಾಗಿ ಪರಿವರ್ತಿಸಿ ಹೆಚ್ಚುವರಿ ಮೀನುಮರಿಗಳನ್ನು ಬಿತ್ತನೆ ಮಾಡಿ ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ರೀತಿಯ ಆಹಾರ ಉತ್ಪಾದನೆ ಮಾಡುವ ವಿಧಾನವನ್ನು ಸಮಗ್ರ ಮೀನು ಕೃಷಿ ಎನ್ನುತ್ತಾರೆ. ಮೀನು ಕೃಷಿ ಕೈಗೊಳ್ಳಲು ಅಗತ್ಯವಾಗಿ ಬೇಕಾದ ಭೂಪ್ರದೇಶದ ಅಭಾವ, ಕೊಳಗಳ ನಿರ್ಮಾಣಕ್ಕೆ ತಗುಲುವ ಖರ್ಚು, ಮೀನುಗಳಿಗೆ  ಒದಗಿಸುವ ಆಹಾರದ ಬೆಲೆಯೇರಿಕೆ, ನಿರ್ವಹಣೆ ಮಾಡಲು ಆಳುಗಳ ಸಂಖ್ಯೆ ಮತ್ತು ದುಬಾರಿ ಸಂಬಳ ಇವುಗಳ ಪರಿಣಾಮವಾಗಿ, ಒಂದು ನಿಗದಿತ ಪ್ರದೇಶದಲ್ಲಿ ಮೀನು ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವ ಅವಶ್ಯಕತೆ ಇದ್ದು, ಈ ದೃಷ್ಟಿಯಿಂದ ಮೀನು ಕೃಷಿಯನ್ನು ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಹಂದಿ ಸಾಕಾಣಿಕೆ, ಕೋಳಿ ಮತ್ತು ಬಾತುಕೋಳಿ ಸಾಕಾಣಿಕೆ, ಸಾಧ್ಯವಾದ ಕಡೆ ಒಂದೆರಡು ಚಟುವಟಿಕೆಗಳ ಜೊತೆಗೆ ಹೊಂದಿಸಿಕೊಂಡು, ಕೃಷಿ ಕ್ಷೇತ್ರದಲ್ಲಿ ಲಭ್ಯವಾಗುವ ಎಲ್ಲಾ ತ್ಯಾಜ್ಯ ವಸ್ತುಗಳನ್ನು ಮೀನು ಕೃಷಿಗೆ ಉಪಯೋಗಿಸಿಕೊಂಡು ಮೀನು ಉತ್ಪಾದನೆಯ ವೆಚ್ಚವನ್ನು ಕಡಿಮೆ ಮಾಡಿಕೊಳ್ಳುವುದರ ಜೊತೆಗೆ ಲಾಭಾಂಶವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಸಮಗ್ರ ಮೀನು ಕೃಷಿಯು ವಾತಾವರಣದ ನೈರ್ಮಲ್ಯವನ್ನು ಕಾಪಾಡಿಕೊಳ್ಳುವಲ್ಲಿ ಮತ್ತು ಗ್ರಾಮೀಣ ಜನತೆಗೆ ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ಪ್ರೋಟೀನ್ ಒದಗಿಸುವಲ್ಲಿ ಬಹಳ ಪರಿಣಾಮಕಾರಿಯಾಗಿದೆ.

## ಮೀನು ಸಾಕಾಣಿಕೆ ಜೊತೆಯಲ್ಲಿ ಹೈನುಗಾರಿಕೆ

ಕೃಷಿಕರು ದನಗಳನ್ನು ವ್ಯವಸಾಯಕ್ಕಾಗಿ, ಹಾಲು ಉತ್ಪಾದನೆಗಾಗಿ ಹಾಗೂ



ಉತ್ತಮ ಸಾವಯವ ಗೊಬ್ಬರ ಪಡೆಯುವ ಸಲುವಾಗಿ ಸಾಕಿಕೊಂಡಿರುತ್ತಾರೆ. ಹಸುಗಳ ಸಗಣಿಯಲ್ಲಿ ಸಾರಜನಕ, ರಂಜಕ, ಅವಶ್ಯಕ ಲವಣಾಂಶ, ವಿಟಮಿನ್ಸ್, ಸೂಕ್ಷ್ಮ ಜೀವಿಗಳ ಪೂರೈಕೆ ಎಲ್ಲವು ಅಡಗಿದ್ದು, ಕೊಳದಲ್ಲಿ ನೈಸರ್ಗಿಕ ಆಹಾರ ಉತ್ಪತ್ತಿಗೆ ಸಹಾಯಕವಾಗಿವೆ. ದನದ ಸಗಣಿ ಪ್ರತಿದಿನ ಸ್ವಲ್ಪ ಪ್ರಮಾಣದಲ್ಲಿ ಕೊಳದ ನೀರಿಗೆ ಸೇರುವುದರಿಂದ ಅದು ಸುಲಭವಾಗಿ ಕರಗಿ ನೀರಿನೊಂದಿಗೆ ಬೆರೆಯುತ್ತದೆ. ದನದ ಸಗಣಿಯು ಮೀನಿನ ಆಹಾರಗಳಲ್ಲಿ ಒಂದಾದ ಸೂಕ್ಷ್ಮಾಣು ಪ್ರಾಣಿ ಜೀವಿಗಳ ಉತ್ಪಾದನೆಗೆ ಸಹಕಾರಿಯಾಗಿದೆ. ದನದ ಕೊಟ್ಟಿಗೆಗಳನ್ನು ಕೊಳದ ಬದುವಿನ ಮೇಲೆ ಅಥವಾ ಕೊಳದ ಸಮೀಪ ನಿರ್ಮಿಸಿ ದನಗಳನ್ನು ಸಾಕಬಹುದು. ಕೊಟ್ಟಿಗೆಯನ್ನು ಕೊಳದ ಕಡೆ ಇಳಿಜಾರಾಗಿ ನಿರ್ಮಿಸಿದರೆ ದನದ ಮಲಮೂತ್ರ ಮತ್ತು ಕೊಟ್ಟಿಗೆ ತೊಳೆದ ನೀರು ಸರಾಗವಾಗಿ ಕೊಳಕ್ಕೆ ಬಿದ್ದು ನೈಸರ್ಗಿಕ ಆಹಾರ ಉತ್ಪತ್ತಿಯಾಗಲು ಸಹಾಯವಾಗುತ್ತದೆ. ಕೃಷಿ ಕೊಳದ ಬದುಗಳ ಇಳಿಜಾರು ಪ್ರದೇಶವನ್ನು ದನಗಳಿಗೆ ಬೇಕಾದ ಮೇವು ಹುಲ್ಲನ್ನು ಬೆಳೆಸಲು ಬಳಸಬಹುದು. ಒಂದು ಎಕರೆ ಕೊಳಕ್ಕೆ 1 ರಿಂದ 2 ಹಸು ಅಥವಾ ಎಮ್ಮೆ ಸಾಕಾಗುತ್ತದೆ. ದನದ ಮೂತ್ರವನ್ನು ಮಾತ್ರ ಬಳಸಿಕೊಂಡು ಮೀನು ಸಾಕಣೆ ಮಾಡುವುದಾದರೆ 5 ರಿಂದ 6 ಹಸು ಅಥವಾ ಎಮ್ಮೆಗಳು ಸಾಕಾಗುತ್ತವೆ. ಈ ಪದ್ಧತಿಯಿಂದ ಮೀನಿಗೆ ಯಾವುದೇ ಕೃತಕ ಆಹಾರ ಕೊಡದೆ 1500 ರಿಂದ 2000 ಕೆ.ಜಿ ಮೀನು ಉತ್ಪನ್ನವನ್ನು ಪಡೆಯಬಹುದು.

## ಮೀನು ಸಾಕಾಣಿಕೆ ಜೊತೆಯಲ್ಲಿ ಹಂದಿ ಸಾಕಾಣಿಕೆ





ಹಂದಿಗಳು ಅಮೂಲ್ಯವಾದ ಗೊಬ್ಬರ ಉತ್ಪಾದಿಸುವ ಕಾರ್ಖಾನೆಗಳಿದ್ದಂತೆ. ಕೃಷಿಯ ಉತ್ಪನ್ನಗಳನ್ನು, ಉಪ-ಉತ್ಪನ್ನಗಳನ್ನು, ಮನೆಯಲ್ಲಿ ಉಳಿದ ಆಹಾರ, ಬಳಸದೆ ಉಳಿದ ಹಣ್ಣು ತರಕಾರಿಗಳ ಭಾಗಗಳನ್ನು ಹಂದಿಗಳಿಗೆ ಆಹಾರವನ್ನಾಗಿ ಬಳಸಬಹುದು. ಹಂದಿಗಳಿಂದ ಉತ್ತಮ ಗುಣಮಟ್ಟದ ಗೊಬ್ಬರವನ್ನು ಮೀನು ಕೊಳದ ನೀರನ್ನು ಫಲವತ್ತತೆ ಮಾಡಲು ಬಳಸಿಕೊಳ್ಳಬಹುದು. ಅಲ್ಲದೆ, ಹಂದಿ ಗೊಬ್ಬರದಲ್ಲಿ ಜೀರ್ಣವಾಗದೆ ಉಳಿಯುವ ಆಹಾರ ಮೀನುಗಳಿಗೆ ಆಹಾರವಾಗುತ್ತದೆ. ಕೃಷಿ ಕ್ಷೇತ್ರದ ಅಕ್ಕ ಪಕ್ಕದ ಕೊಳ ಮತ್ತು ಕಾಲುವೆಗಳಲ್ಲಿ ಲಭ್ಯವಿರುವ ಜಲಸಸ್ಯಗಳ ಎಲೆಗಳನ್ನು ಮತ್ತು ಭೂಸಸ್ಯದ ಎಲೆಗಳನ್ನು ಸಹ ಹಂದಿಗೆ ಆಹಾರವಾಗಿ ನೀಡಬಹುದಾಗಿದೆ. ಹಂದಿ ಸಾಕುವ ಗೂಡನ್ನು ಕೊಳದ ಬದುವಿನ ಮೇಲೆ ಸ್ವಲ್ಪ ಕೊಳದ ಕಡೆ ಇಳಿಜಾರಿನಲ್ಲಿ ನಿರ್ಮಿಸಬೇಕು, ಆಗ ಗೂಡಿನ ನೆಲ ತೊಳೆದ ನೀರು ಮತ್ತು ಹಂದಿ ಮೂತ್ರ ಸರಾಗವಾಗಿ ಕೊಳಕ್ಕೆ ಬೀಳುತ್ತದೆ. ಹಂದಿ ಮರಿ ಮಾರಾಟ ಗಾತ್ರಕ್ಕೆ ಬರಲು ಆರು ತಿಂಗಳು ಕಾಲ ಬೇಕು. ಆದ್ದರಿಂದ ಹಂದಿ ಮರಿಗಳನ್ನು ಎರಡು ಹಂತಗಳಲ್ಲಿ ಅಂದರೆ ಪ್ರತಿ ಹಂತದಲ್ಲಿ 6 ರಿಂದ 8 ರಂತೆ ಹಂದಿಗಳನ್ನು ಸಾಕಿದರೆ ಮೀನು ಸಾಕಣೆಯ ಅವಧಿಗೆ ಸರಿ ಹೊಂದುತ್ತದೆ. ಈ ರೀತಿ ಸಮಗ್ರ ಕೃಷಿ ಮಾಡುವುದರಿಂದ ಮೀನಿಗೆ ಯಾವುದೇ ಕೃತಕ ಆಹಾರ ಕೊಡದೆ 1000 ರಿಂದ 1500 ಕೆ.ಜಿ ಯಷ್ಟು ಮೀನು ಉತ್ಪಾದನೆಯನ್ನು ಪಡೆಯಬಹುದು.

## ಮೀನು ಸಾಕಾಣಿಕೆ ಜೊತೆಯಲ್ಲಿ ಕೋಳಿ ಸಾಕಾಣಿಕೆ



ಕೋಳಿ ಗೊಬ್ಬರವು ಹೆಚ್ಚಿನ ಪ್ರಮಾಣದಲ್ಲಿ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಪೋಷಕಾಂಶಗಳನ್ನು ಒಳಗೊಂಡಿದೆ. ಕೋಳಿ ಗೊಬ್ಬರವು ನೈಸರ್ಗಿಕ ಆಹಾರವನ್ನು ಕೊಳದಲ್ಲಿ ಬೇಗನೆ ಉತ್ಪತ್ತಿ ಮಾಡುತ್ತದೆ. ಮೀನು ಮರಿಗಳನ್ನು ಕೊಳಕ್ಕೆ ಬಿಡುವ 20 ದಿವಸಗಳ ಮೊದಲು ಕೋಳಿ ಸಾಕಣೆಯನ್ನು ಕೈಗೊಳ್ಳಬೇಕು. ಕೋಳಿ ಸಾಕಣೆಯನ್ನು ಕೊಳದ ಮೇಲ್ಭಾಗದಲ್ಲಿ ಅಥವಾ ಕೊಳದ ಬದಿಯಲ್ಲಿ ಕೈಗೊಳ್ಳಬಹುದು. ಕೊಳದ ಮೇಲ್ಭಾಗದಲ್ಲಿ ಕೈಗೊಂಡಾಗ ಸ್ಥಳದ ಉಪಯೋಗ ಮತ್ತು ಕೋಳಿಯಿಂದ ಬೀಳುವ ಗೊಬ್ಬರ ಪರಿಣಾಮಕಾರಿಯಾಗಿ ಉಪಯೋಗವಾಗುತ್ತದೆ. ಕೋಳಿ ಗೊಬ್ಬರವು ನೇರವಾಗಿ ಪ್ರತಿನಿತ್ಯ ಕೊಳಕ್ಕೆ ಬೀಳುವುದರಿಂದ ಶೇಕಡ 15 ರಿಂದ 20 ರಷ್ಟು ಭಾಗ ಮೀನಿಗೆ ಆಹಾರವಾಗುತ್ತದೆ. ಒಂದು ಎಕರೆ ಕೊಳಕ್ಕೆ ಒಂದು ವರ್ಷಕ್ಕೆ ಬೇಕಾದ ಕೋಳಿ ಗೊಬ್ಬರವನ್ನು ಪೂರೈಕೆ ಮಾಡಲು 200 ರಿಂದ 225 ಮೊಟ್ಟೆ ಕೋಳಿಗಳನ್ನು ಸಾಕಬೇಕು. ಈ ಪದ್ಧತಿಯಿಂದ ಮೀನಿಗೆ ಯಾವುದೇ ಕೃತಕ ಆಹಾರ ಕೊಡದೆ 1500 ರಿಂದ 2000 ಕೆ.ಜಿ ಮೀನು ಉತ್ಪಾದನೆಯನ್ನು ಪಡೆಯಬಹುದು.